**ಭಾರತದ ಜನತೆಯಾದ ನಾವು**

**Vs.**

**ಭಾರತ ಸರ್ಕಾರ**

**ಭಾರತದ ಸಂವಿಧಾನವು ಖಾತ್ರಿಪಡಿಸಿರುವ ಸಂಸದೀಯ ಪ್ರಜಾಸತ್ತೆಯನ್ನು ದಿಕ್ಕು ತಪ್ಪಿಸುತ್ತಿರುವ ಭಾರತ ಸರ್ಕಾರದ ವಿರುದ್ಧ ಆರೋಪಪಟ್ಟಿ**

**ಬಿಡುಗಡೆ : February 09, 2024**

| ಕ್ರಮ ಸಂಖ್ಯೆ | **ಆರೋಪಗಳು** |
|---|---|
| **1** | ಸಂವಿಧಾನದ 93ನೇ ಕಲಂನ ಉಲ್ಲಂಘನೆ: ಲೋಕಸಭೆಯಲ್ಲಿ ಉಪಸಭಾಪತಿಗಳ ನೇಮಕ ಆಗಿಲ್ಲ |
| **2** | ಲೋಕಸಭೆ ಅಧಿವೇಶನದ ಅವಧಿಯನ್ನು ತೀವ್ರ ಕಡಿತ ಮಾಡಲಾಗಿದೆ. ಸಂಸತ್ತನ್ನು ಸರ್ಕಾರ ತನ್ನಿಚ್ಛೆಯಂತೆ ನಿಯಂತ್ರಿಸುತ್ತಿದೆ. ಸರ್ಕಾರದ ಹೊಣೆಗಾರಿಕೆಯನ್ನು ಪ್ರಶ್ನಿಸಲು ಅವಕಾಶಗಳನ್ನು ನಿರಾಕರಿಸಲಾಗುತ್ತಿದೆ. |
| **3** | ಸಂಸತ್ತಿನ ಕೂಲಂಕಷ ಪರಿಶೀಲನೆಯನ್ನು ತಪ್ಪಿಸಿ, ಮೇಲಿಂದ ಮೇಲೆ ಸುಗ್ರೀವಾಜ್ಞೆಗಳನ್ನು ಹೊರಡಿಸಲಾಗುತ್ತಿದೆ. ಈ ಸುಗ್ರೀವಾಜ್ಞೆಗಳನ್ನು ಮರುಪ್ರಕಟಿಸುವ ಮೂಲಕ ಸಂವಿಧಾನವನ್ನು ವಂಚಿಸಲಾಗುತ್ತಿದೆ. |
| **4** | ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿ ಮಸೂದೆಗಳನ್ನು ದಿಢೀರ್ ಆಗಿ ಮಂಡಿಸುವುದು, ಚರ್ಚೆಗೆ ಆಸ್ಪದವಿಲ್ಲದೆ, ಪ್ರತಿಪಕ್ಷಗಳ ಸದಸ್ಯರ ಅನುಪಸ್ಥಿತಿಯಲ್ಲಿ ಮಸೂದೆಗಳಿಗೆ ಅನುಮೋದನೆ ಪಡೆಯಲಾಗುತ್ತಿದೆ |
| **5** | ಕಾಯಿದೆಗಳ ರಚನೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇರುವುದಿಲ್ಲ, ಸಾರ್ವಜನಿಕರೊಂದಿಗೆ ಸಮಾಲೋಚನೆ ಮಾಡದಿರುವುದು, ಶಾಸನ–ಪೂರ್ವ ಸಮಾಲೋಚನೆ ಪ್ರಕ್ರಿಯೆಯ ಉಲ್ಲಂಘನೆ ಮತ್ತು ಮಸೂದೆಗಳನ್ನು ಸ್ಥಾಯಿ ಸಮಿತಿಗಳ ಪರಿಶೀಲನೆಗೆ ಒಳಪಡಿಸದೆ ಇರುವುದು |
| **6** | ಸಾಕಷ್ಟು ಪರಿಶೀಲನೆ, ಮುನ್ನೆಚ್ಚರಿಕೆ ಇಲ್ಲದೆ ಬಜೆಟ್ ಮಂಡನೆ ಮಾಡುವುದು; ಆರ್ಥಿಕ ಮಸೂದೆಯಲ್ಲಿ ಎಲೆಕ್ಷನ್ ಬಾಂಡ್‌ಗಳ ವಿಷಯವನ್ನು ಸೇರಿಸುವಷ್ಟು ಬೇಜವಾಬ್ದಾರಿತನ ಮಾಡುವುದು |
| **7** | 2023ನೇ ಸಾಲಿನ ಚಳಿಗಾಲದ ಅಧಿವೇಶನದಲ್ಲಿ ಹಿಂದೆಂದೂ ಇಲ್ಲದಷ್ಟು ಸಂಖ್ಯೆಯ ಪ್ರತಿಪಕ್ಷದ ಸದಸ್ಯರನ್ನು ಉಚ್ಚಾಟನೆ ಮಾಡಿರುವುದು, ಪ್ರತಿಪಕ್ಷಗಳ ಪ್ರಾತಿನಿಧ್ಯವೇ ಇಲ್ಲದ ಸದನದಲ್ಲಿ ವಿವಾದಾತ್ಮಕ ಮಸೂದೆಗಳನ್ನು ಮಂಡಿಸಿ, ಅನುಮೋದನೆ ಪಡೆದಿರುವುದು |
| **8** | ಪ್ರಶ್ನೆಗಳನ್ನು ಎದುರಿಸಲು ಮುಜುಗರ ಪಡುವುದು, ಪ್ರತಿಪಕ್ಷಗಳ ಸಂಸತ್ ಸದಸ್ಯರ ಪ್ರಶ್ನೆಗಳನ್ನು ಪಟ್ಟಿಯಿಂದ ಕಿತ್ತುಹಾಕುವುದು, ಸಚಿವಾಲಯಗಳು ಸದಸ್ಯರ ಪ್ರಶ್ನೆಗಳಿಗೆ ಹಾರಿಕೆಯ ಉತ್ತರ ನೀಡುವುದು |

**ಆರೋಪಗಳಿಗೆ ಪುರಾವೆಗಳು**

**ಆರೋಪ 1:** ಸಂವಿಧಾನದ 93ನೇ ಕಲಂ ಉಲ್ಲಂಘನೆ: ಲೋಕಸಭೆಯಲ್ಲಿ ಉಪಸಭಾಪತಿಗಳ ನೇಮಕ ಆಗಿಲ್ಲ

**ಪುರಾವೆ:** 2019ರ ಜೂನ್ 17ರಂದು 17ನೇ ಲೋಕಸಭೆಯ ಆರಂಭದಿಂದಲೂ ಉಪಸಭಾಪತಿಯನ್ನು ಆಯ್ಕೆ ಮಾಡಿಲ್ಲ. ಸಂವಿಧಾನದ ಕಲಂ 93ರಲ್ಲಿ **'ಲೋಕಸಭೆಯು ಸಾಧ್ಯವಾದಷ್ಟು ಬೇಗ ಸಭಾಪತಿ ಮತ್ತು ಉಪಸಭಾಪತಿಯನ್ನು ಆಯ್ಕೆ ಮಾಡಬೇಕು'** ಎಂದು ಸ್ಪಷ್ಟವಾಗಿ ಹೇಳಿದ್ದರೂ ಕೂಡ, ಸ್ವಾತಂತ್ರ್ಯಾನಂತರದಲ್ಲಿ ಇದೇ ಮೊದಲ ಬಾರಿಗೆ ಲೋಕಸಭೆಯು ಉಪಸಭಾಪತಿಯನ್ನು ಆಯ್ಕೆ ಮಾಡದೆಯೇ ತನ್ನ ಐದು ವರ್ಷಗಳ ಅವಧಿ ಪೂರೈಸಲಿದೆ. ಸಾಧಾರಣವಾಗಿ ಸಭಾಪತಿಯು ಸರ್ಕಾರ ನಡೆಸುವ ಪಕ್ಷದ ಅಭ್ಯರ್ಥಿಯಾಗಿದ್ದು, ಉಪಸಭಾಪತಿಯು ಪ್ರತಿಪಕ್ಷಗಳ ಅಭ್ಯರ್ಥಿಯಾಗಿರುತ್ತಾರೆ. ಇದು ನಡೆದುಕೊಂಡು ಬಂದಿರುವ ಪದ್ಧತಿ. ಈ ಬಾರಿ ಸರ್ಕಾರ ನಡೆಸುತ್ತಿರುವ ಪಕ್ಷವು ತನ್ನ ಮೇಲುಗಾರಿಕೆಯನ್ನು ಹೇರಲು ಉಪಸಭಾಪತಿಯ ಆಯ್ಕೆ ಪ್ರಕ್ರಿಯೆಯನ್ನೇ ವಿಳಂಬ ಮಾಡುತ್ತಾ ಬಂದಿದೆ.

**ಆರೋಪ 2:** ಲೋಕಸಭೆ ಅಧಿವೇಶನದ ಅವಧಿಯನ್ನು ತೀವ್ರ ಕಡಿತ ಮಾಡಲಾಗಿದೆ. ಸಂಸತ್ತನ್ನು ಸರ್ಕಾರ ತನ್ನಿಚ್ಛೆಯಂತೆ ನಿಯಂತ್ರಿಸುತ್ತಿದೆ. ಸರ್ಕಾರದ ಹೊಣೆಗಾರಿಕೆಯನ್ನು ಪ್ರಶ್ನಿಸುವ ಅವಕಾಶಗಳನ್ನು ನಿರಾಕರಿಸಲಾಗುತ್ತಿದೆ.

**ಪುರಾವೆ:**

- ಮೊದಲಿಗೆ 2014–19ರ ಅವಧಿಯ 16ನೇ ಲೋಕಸಭೆಯು ಐದು ವರ್ಷಗಳ ಅವಧಿಯಲ್ಲಿ 331 ದಿನಗಳ ಕಲಾಪದೊಂದಿಗೆ ಅತ್ಯಂತ ಕಡಿಮೆ ಕಲಾಪ ನಡೆಸಿದ ಮೊದಲ ಲೋಕಸಭೆಯಾಗಿತ್ತು. ಆದರೆ ಈಗಿನ 17ನೇ ಲೋಕಸಭೆಯು (2019–24) ಬಜೆಟ್ ಅಧಿವೇಶನವೂ ಸೇರಿ ಸುಮಾರು 278 ದಿನಗಳ ಕಲಾಪವನ್ನು ಮಾತ್ರ ನಡೆಸಲಿದೆ. ಇದು ಹಿಂದೆ 1999–2004ರ ಅವಧಿಯಲ್ಲಿ ಎನ್‌ಡಿಎ ಒಕ್ಕೂಟ ಸರ್ಕಾರವು ನಡೆಸಿದ್ದ 13ನೇ ಲೋಕಸಭೆಯ 423 ದಿನಗಳ ಕಲಾಪಕ್ಕಿಂತಲೂ ಶೇ.34ರಷ್ಟು ಕಡಿಮೆ ಕಲಾಪವಾಗಿ ಇತಿಹಾಸದಲ್ಲಿ ದಾಖಲಾಗಲಿದೆ.
- 2020ರಲ್ಲಿ ಕೋವಿಡ್ ಸಾಂಕ್ರಾಮಿಕದ ಕಾರಣ ಭಾರತದ ಸಂಸತ್ತು 33 ದಿನಗಳ ಕಲಾಪವನ್ನು ಮಾತ್ರ ನಡೆಸಲು ಸಾಧ್ಯವಾಗಿತ್ತು. ಆದರೆ ಜಗತ್ತಿನ ಅನೇಕ ಪ್ರಜಾಪ್ರಭುತ್ವ ದೇಶಗಳು ಆನ್‌ಲೈನ್‌ನಲ್ಲಿ ಕಲಾಪಗಳನ್ನು ನಡೆಸಿ, ಆನ್‌ಲೈನ್‌ನಲ್ಲೇ ಚರ್ಚೆಗೆ, ಮತ ಹಾಕುವುದಕ್ಕೆ ಅನುವು ಮಾಡಿಕೊಟ್ಟಿದ್ದವು. ಆದರೆ ಭಾರತದ ಸಂಸತ್ತು ಮಾತ್ರ ಸಂಪೂರ್ಣ ಕದವಿಟ್ಟುಕೊಂಡು ಕುಳಿತಿತ್ತು. 2020ರ ಚಳಿಗಾಲದ ಅಧಿವೇಶನ ನಡೆಯಲೇ ಇಲ್ಲ. ಕೋವಿಡ್ ಕಾಲದಲ್ಲಿ ಸರ್ಕಾರ ಕೈಗೊಂಡ ಕ್ರಮಗಳು, ವಲಸೆ ಕಾರ್ಮಿಕರು ಪಟ್ಟಪಾಡು ಇತ್ಯಾದಿ ಜ್ವಲಂತ ವಿಷಯಗಳನ್ನು ಚರ್ಚೆ ಮಾಡಬೇಕಾಗಿದ್ದ ಸ್ಥಾಯಿ ಸಮಿತಿಗಳೂ ಕೂಡ ಸಭೆ ಸೇರಲಿಲ್ಲ. ಆನ್‌ಲೈನ್ ಸಭೆ ನಡೆಸಲೂ ಅವರಿಗೆ ಅವಕಾಶ ನೀಡಲಿಲ್ಲ.
- ರಾಜ್ಯಗಳ ವಿಧಾನಸಭೆ ಚುನಾವಣೆಗಳನ್ನು ನೆಪವಾಗಿಸಿಕೊಂಡು ಸಂಸತ್ ಕಲಾಪದ ಅವಧಿಯನ್ನು ಮೊಟಕುಗೊಳಿಸಲಾಗುತ್ತಿದೆ. 2017 ಮತ್ತು 2022ರಲ್ಲಿ ಗುಜರಾತ್ ಮೊದಲಾದ ರಾಜ್ಯಗಳ ವಿಧಾನಸಭೆ ಚುನಾವಣೆಯ ಕಾರಣ ಚಳಿಗಾಲದ ಅಧಿವೇಶನವನ್ನು ವಿಳಂಬ ಮಾಡಲಾಗಿತ್ತು ಹಾಗೂ ಅವಧಿಯನ್ನು ಮೊಟಕುಗೊಳಿಸಲಾಗಿತ್ತು. 2018 ಮತ್ತು 2023ರಲ್ಲಿ ಮತ್ತೆ ರಾಜಸ್ಥಾನ ಮತ್ತು ತೆಲಂಗಾಣದ ವಿಧಾನಸಭೆ ಚುನಾವಣೆಗಳ ಹೆಸರಿನಲ್ಲಿ ಚಳಿಗಾಲದ ಅಧಿವೇಶನವನ್ನು ವಿಳಂಬ ಮಾಡಿದ್ದಲ್ಲದೆ, ಕಲಾಪದ ದಿನಗಳನ್ನು ಕಡಿತಗೊಳಿಸಲಾಯಿತು.
- ಸರ್ಕಾರ ತನ್ನ ಅಜೆಂಡಾ ಪೂರ್ಣಗೊಂಡ ಕೂಡಲೆ, ಇನ್ನೂ ಅವಧಿ ಇದ್ದರೂ ಸಂಸತ್ ಕಲಾಪವನ್ನು ಮುಂದೂಡಿಸುತ್ತದೆ. 2020ರಿಂದ 2022ರವರೆಗಿನ ಅವಧಿಯಲ್ಲಿ ಸಂಸತ್ ಅಧಿವೇಶನವು ಏಳು ಬಾರಿ ಅವಧಿಗೆ ಮೊದಲೇ ಮುಕ್ತಾಯಗೊಂಡಿತು. 2023ರ ವಿಶೇಷ ಅಧಿವೇಶನ ಮತ್ತು ಚಳಿಗಾಲದ ಅಧಿವೇಶನಗಳೆರಡೂ ಅವಧಿಗೆ ಮೊದಲೇ ಕೊನೆಯಾದವು. ಹೀಗೆ ಅವಧಿಗೆ ಮೊದಲೇ ಅಧಿವೇಶನ ಮುಕ್ತಾಯಗೊಂಡರೆ, ಉಳಿದ ದಿನಗಳಿಗೆ ನಿಗಧಿಯಾಗಿದ್ದ ಪ್ರಶ್ನೆಗಳು ಮತ್ತು ಕಲಾಪಗಳು ರದ್ದಾಗುತ್ತವೆ. ಸಾರ್ವಜನಿಕ ಪ್ರಾಮುಖ್ಯತೆಯ ಪ್ರಶ್ನೆಗಳನ್ನು ಸದನದಲ್ಲಿ ಎತ್ತುವ ಅವಕಾಶ ಸಂಸತ್ ಸದಸ್ಯರಿಗೆ ಇಲ್ಲವಾಗುತ್ತದೆ. ಹೀಗೆ ಸಂಸತ್ತು, ದೇಶದ ನಾಗರಿಕರ ಸಮಸ್ಯೆಗಳನ್ನು, ಹಿತಾಸಕ್ತಿಯನ್ನು ಚರ್ಚೆ ಮಾಡುವ ಬದಲಿಗೆ, ಆಡಳಿತ ಪಕ್ಷದ ಅಜೆಂಡಾವನ್ನು ಮಾತ್ರ ಸಾಧಿಸುವ ತಾಣವಾಗುತ್ತದೆ.

**ಆರೋಪ 3:** ಸಂಸತ್ತಿನ ಕೂಲಂಕಷ ಪರಿಶೀಲನೆಯನ್ನು ತಪ್ಪಿಸಿ, ಮೇಲಿಂದ ಮೇಲೆ ಸುಗ್ರೀವಾಜ್ಞೆಗಳನ್ನು ಹೊರಡಿಸಲಾಗುತ್ತಿದೆ. ಈ ಸುಗ್ರೀವಾಜ್ಞೆಗಳನ್ನು ಮರುಪ್ರಕಟಿಸುವ ಮೂಲಕ ಸಂವಿಧಾನವನ್ನು ವಂಚಿಸಲಾಗುತ್ತಿದೆ.

**ಪುರಾವೆಗಳು:**

- 2004ರಿಂದ 2014ರವರೆಗಿನ ಹತ್ತು ವರ್ಷಗಳಲ್ಲಿ ಯುಪಿಎ–2 ಸರ್ಕಾರವು 61 ಸುಗ್ರೀವಾಜ್ಞೆಗಳನ್ನು ಹೊರಡಿಸಿತ್ತು. 2014ರಿಂದ 2021ರವರೆಗಿನ ಏಳು ವರ್ಷಗಳಲ್ಲಿ ಈಗಿನ ಸರ್ಕಾರ 76 ಸುಗ್ರೀವಾಜ್ಞೆಗಳನ್ನು ತಂದು ಹಿಂದಿನ ದಾಖಲೆಯನ್ನು ಮುರಿದಿದೆ.

- ಭೂಸ್ವಾಧೀನ ತಿದ್ದುಪಡಿ ಸುಗ್ರೀವಾಜ್ಞೆಯನ್ನು ಮೂರು ಸಲ ಮರುಪ್ರಕಟಿಸಲಾಗಿದೆ (2014–15). ಶತ್ರು ಆಸ್ತಿ (ತಿದ್ದುಪಡಿ ಮತ್ತು ಊರ್ಜಿತಗೊಳಿಸುವುದು) ಸುಗ್ರೀವಾಜ್ಞೆಯನ್ನು 2016ರ ಒಂದು ವರ್ಷದಲ್ಲೇ ಐದು ಬಾರಿ ಮರುಪ್ರಕಟಿಸಿರುವುದು ಮತ್ತೊಂದು ಬಗೆಯ ದಾಖಲೆಯಾಗಿದೆ! ಈ ರೀತಿ ಸುಗ್ರೀವಾಜ್ಞೆಗಳನ್ನು ನವೀಕರಿಸಿ ಮರುಪ್ರಕಟಿಸುವುದು ಸಂವಿಧಾನಕ್ಕೆ ಮಾಡುವ ದ್ರೋಹವಾಗಿದೆ. ವಿಶೇಷ ಸಂದರ್ಭಗಳಲ್ಲಿ ತಾತ್ಕಾಲಿಕ ಅವಕಾಶಗಳನ್ನು ಕಲ್ಪಿಸಲು ಮಾತ್ರ ಸುಗ್ರೀವಾಜ್ಞೆ ಹೊರಡಿಸಬೇಕು ಎನ್ನುತ್ತದೆ ಸಂವಿಧಾನ.
- 2020ರಲ್ಲಿ ಕೋವಿಡ್‌ನಿಂದ ದೇಶದ ಜನತೆ ತತ್ತರಿಸಿಹೋಗಿದ್ದ ಸಂದರ್ಭದಲ್ಲಿ ಮೂರು ಕೃಷಿ ಕಾಯಿದೆಗಳನ್ನು ಸುಗ್ರೀವಾಜ್ಞೆಯ ಮೂಲಕ ತರಲಾಗಿತ್ತು.
- ದೆಹಲಿಯಲ್ಲಿ ನೀಡಬೇಕಾದ ಜನಸೇವೆಗಳ ನಿಯಂತ್ರಣವನ್ನು ದೆಹಲಿ ಸರ್ಕಾರದ ಸುಪರ್ದಿಗೆ ಒಪ್ಪಿಸಿದ್ದ ಸುಪ್ರೀಂ ಕೋರ್ಟ್‌ನ ಆದೇಶವನ್ನು ಬುಡಮೇಲುಗೊಳಿಸುವ ಉದ್ದೇಶದಿಂದ ಗವರ್ನ್‌ಮೆಂಟ್ ಆಫ್ ಎನ್‌ಸಿಟಿ ಆಫ್ ಡೆಲ್ಲಿ (ಅಮೆಂಡ್‌ಮೆಂಟ್) ಸುಗ್ರೀವಾಜ್ಞೆಯನ್ನು 2023ರಲ್ಲಿ ಹೊರಡಿಸಲಾಯಿತು. ಇವೆಲ್ಲ ಸಂದರ್ಭಗಳು ಈಗಿನ ಆಡಳಿತ ನಡೆಸುತ್ತಿರುವ ರಾಜಕೀಯ ಪಕ್ಷವು ಕಾನೂನಿಗೆ ಬದ್ಧವಾಗಿ, ಪ್ರಜಾಸತ್ತಾತ್ಮಕವಾಗಿ ಮತ್ತು ಪಾರದರ್ಶಕವಾಗಿ ಆಡಳಿತ ನಡೆಸಲು ವಿಫಲವಾಗಿರುವುದರ ಸೂಚನೆಗಳಾಗಿವೆ.

**ಆರೋಪ 4:** ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿ ಮಸೂದೆಗಳನ್ನು ದಿಢೀರ್ ಆಗಿ ಮಂಡಿಸುವುದು, ಚರ್ಚೆಗೆ ಆಸ್ಪದವಿಲ್ಲದೆ, ಪ್ರತಿಪಕ್ಷಗಳ ಸದಸ್ಯರ ಅನುಪಸ್ಥಿತಿಯಲ್ಲಿ ಮಸೂದೆಗಳಿಗೆ ಅನುಮೋದನೆ ಪಡೆಯುವುದು

**ಪುರಾವೆಗಳು:**

- ಈಗಿನ 17ನೇ ಲೋಕಸಭೆಯಲ್ಲಿ ಮೇ 2019ರಿಂದ 21 ಡಿಸೆಂಬರ್ 2023ರವರೆಗಿನ ಅವಧಿಯಲ್ಲಿ ಲೋಕಸಭೆಯಲ್ಲಿ 86 ಮಸೂದೆಗಳನ್ನು, ರಾಜ್ಯಸಭೆಯಲ್ಲಿ 103 ಮಸೂದೆಗಳನ್ನು ಎರಡು ತಾಸಿಗೂ ಕಡಿಮೆ ಅವಧಿಯ ಚರ್ಚೆಯಲ್ಲಿ ಅನುಮೋದನೆ ಪಡೆಯಲಾಗಿದೆ.
- 2023ರ ಚಳಿಗಾಲದ ಅಧಿವೇಶನದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಗಳ ಪ್ರತಿಪಕ್ಷಗಳ ಸಂಸತ್ ಸದಸ್ಯರನ್ನು ಸಾಮೂಹಿಕವಾಗಿ ಉಚ್ಚಾಟಿಸಿದ ನಂತರ ಮೂರೇ ದಿನಗಳ ಅವಧಿಯಲ್ಲಿ, ಕೆಲವೇ ಪ್ರತಿಪಕ್ಷ ಸದಸ್ಯರ ಉಪಸ್ಥಿತಿಯಲ್ಲಿ 14 ಮಸೂದೆಗಳನ್ನು ಮಂಡಿಸಿ ಎರಡೂ ಮನೆಗಳಿಂದ ಇಲ್ಲವೇ ಒಂದು ಮನೆಯಿಂದ ಅನುಮೋದನೆ ಪಡೆಯಲಾಗಿದೆ.
- 2023ರ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಿದ ಮೂರು ಅಪರಾಧ ಸಂಹಿತೆ ಮಸೂದೆಗಳ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಲೋಕಸಭೆಯ 34 ಸದಸ್ಯರಲ್ಲಿ 25 ಜನರು ಆಡಳಿತ ನಡೆಸುತ್ತಿರುವ ಬಿಜೆಪಿಯ ಸದಸ್ಯರೇ ಆಗಿದ್ದರು. ರಾಜ್ಯಸಭೆಯಲ್ಲಿ ಚರ್ಚೆಯಲ್ಲಿ ಪಾಲ್ಗೊಂಡ 40 ಸದಸ್ಯರಲ್ಲಿ 30 ಬಿಜೆಪಿಯ ಸದಸ್ಯರಾಗಿದ್ದರು.
- 2020ರ ಮುಂಗಾರು ಅಧಿವೇಶನದಲ್ಲಿ ಕೃಷಿ ಕಾಯಿದೆಗಳನ್ನು ವಿರೋಧಿಸಿ ಪ್ರತಿಪಕ್ಷಗಳು ಕಲಾಪವನ್ನು ಬಹಿಷ್ಕರಿಸಿದ್ದಾಗ 27 ಮಸೂದೆಗಳನ್ನು ಮಂಡಿಸಿದ್ದ ಸರ್ಕಾರವು, 15 ಮಸೂದೆಗಳಿಗೆ ಪ್ರತಿಪಕ್ಷಗಳ ಅನುಪಸ್ಥಿತಿಯಲ್ಲಿ ಅನುಮೋದನೆ ಪಡೆಯಿತು.
- 2021ರ ಮುಂಗಾರು ಅಧಿವೇಶನದಲ್ಲಿ ರೈತರ ದೇಶವ್ಯಾಪಿ ಧರಣಿ ಮತ್ತು ಪೆಗಾಸಸ್ ತನಿಖೆ ಹಗರಣ ಕುರಿತು ಚರ್ಚೆ ನಡೆಸಬೇಕೆಂಬ ಬೇಡಿಕೆಯನ್ನು ಸರ್ಕಾರ ನಿರಾಕರಿಸಿದ ಹಿನ್ನೆಲೆಯಲ್ಲಿ ಪ್ರತಿಪಕ್ಷಗಳು ಪ್ರತಿಭಟನೆ–ಧರಣಿಯಲ್ಲಿ ನಿರತರಾಗಿದ್ದ ಸಂದರ್ಭದಲ್ಲಿ ಸರ್ಕಾರವು ಲೋಕಸಭೆಯಲ್ಲಿ 18 ಮಸೂದೆಗಳಿಗೆ ತಲಾ 15 ನಿಮಿಷದಲ್ಲಿ ಅನುಮೋದನೆಯನ್ನು ಪಡೆದುಕೊಂಡಿತು. ಕೆಲವು ಮಸೂದೆಗಳು 5–6 ನಿಮಿಷಗಳಲ್ಲೇ ಕಾಯಿದೆಗಳಾಗಿಬಿಟ್ಟವು.
- 2023ರ ಮುಂಗಾರು ಅಧಿವೇಶನದಲ್ಲಿ ಕೇವಲ ಒಂದು ವಾರದಲ್ಲಿ, ಪ್ರತಿ ಮಸೂದೆಗೆ 21 ನಿಮಿಷಗಳ ಸರಾಸರಿ ಸಮಯದಲ್ಲಿ 7 ಮಸೂದೆಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಯಿತು. ವಿವಾದಾತ್ಮಕ ಅರಣ್ಯ ಸಂರಕ್ಷಣೆ ತಿದ್ದುಪಡಿ ಮಸೂದೆಯ ಬಗ್ಗೆ ಲೋಕಸಭೆಯಲ್ಲಿ ಕೇವಲ ನಾಲ್ಕು ಸದಸ್ಯರು ಮಾತನಾಡಿದರು; 33 ನಿಮಿಷಗಳಲ್ಲಿ ಅನುಮೋದನೆ ಆಯಿತು. ಡಿಜಿಟಲ್ ವೈಯಕ್ತಿಕ ಮಾಹಿತಿ ರಕ್ಷಣೆ ಮಸೂದೆಯ ಬಗ್ಗೆ ಚರ್ಚೆಯಾಗಿದ್ದು 40 ನಿಮಿಷ ಮಾತ್ರ. ಎಂಟು ಸದಸ್ಯರು ಮಾತ್ರ ಚರ್ಚೆಯಲ್ಲಿ ಭಾಗವಹಿಸಿದ್ದರು. ಈ ಮಸೂದೆ ಕುರಿತು ರಾಜ್ಯಸಭೆಯಲ್ಲಿ ಚರ್ಚೆ ನಡೆದಿದ್ದು 50 ನಿಮಿಷಗಳು, ಪ್ರತಿಪಕ್ಷಗಳ ಯಾವ ಸದಸ್ಯರೂ ಸದನದಲ್ಲಿ ಇಲ್ಲದೆ

ಇರುವಾಗ. ಮಣಿಪುರದ ಗಂಭೀರ ಸಮಸ್ಯೆಗಳ ವಿಷಯದಲ್ಲಿ ಧರಣಿ ನಿರತರಾಗಿದ್ದ ಪ್ರತಿಪಕ್ಷಗಳ ಸದಸ್ಯರು ಮಣಿಪುರ ಕುರಿತು ಚರ್ಚೆ ಮಾಡಬೇಕೆಂದು ಹಠ ತೊಟ್ಟಿದ್ದರು.

- 2023ರ ಮುಂಗಾರು ಅಧಿವೇಶನದಲ್ಲಿ ರಾಜ್ಯಸಭೆಯು ಕೇವಲ ಮೂರು ನಿಮಿಷಗಳಲ್ಲಿ ಫಾರ್ಮಸಿ ತಿದ್ದುಪಡಿ ಮಸೂದೆಯನ್ನು ಅನುಮೋದಿಸಿದ್ದು ಇದುವರೆಗಿನ ದಾಖಲೆಯಾಗಿದೆ! ಅದರ ಮರುದಿನ ಲೋಕಸಭೆಯು ಕೇಂದ್ರ ಜಿಎಸ್‌ಟಿ ತಿದ್ದುಪಡಿ ಮತ್ತು ಸಮಗ್ರ ಜಿಎಸ್‌ಟಿ ತಿದ್ದುಪಡಿ ಮಸೂದೆಯನ್ನು ಮೂರೇ ನಿಮಿಷಗಳಲ್ಲಿ ಪಾಸು ಮಾಡಿಸಿಕೊಂಡಿತು.
- ಬಹುತೇಕ ಸಂದರ್ಭಗಳಲ್ಲಿ ಮಸೂದೆಗಳನ್ನು ಕೊನೆಯ ಗಳಿಗೆಯಲ್ಲಿ ಕಲಾಪ ಪಟ್ಟಿಗೆ ಸೇರಿಸಲಾಗಿದೆ
  - 2017ರಲ್ಲಿ ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳ ಹೆಚ್ಚಿನ ಸದಸ್ಯರು ಇಲ್ಲದಿದ್ದಾಗ ಶತ್ರು ಆಸ್ತಿ (ತಿದ್ದುಪಡಿ ಮತ್ತು ಊರ್ಜಿತಗೊಳಿಸುವುದು) ಮಸೂದೆಯನ್ನು ಮಂಡಿಸಿ ಅನುಮೋದನೆ ಪಡೆಯಲಾಯಿತು. ಆ ದಿನದಂದು ಈ ಮಸೂದೆಯನ್ನು ಮಂಡಿಸುವುದಿಲ್ಲ ಎಂದು ಸರ್ಕಾರ ಪ್ರತಿಪಕ್ಷಗಳಿಗೆ ಭರವಸೆ ನೀಡಿದ್ದರ ಹೊರತಾಗಿಯೂ ಮಂಡಿಸಲಾಯಿತು.
  - 2019ರಲ್ಲಿ ಜಮ್ಮು ಮತ್ತು ಕಾಶ್ಮೀರ ಪುನರ್ರಚನೆ ಮಸೂದೆಯನ್ನು ಯಾವ ಮುನ್ಸೂಚನೆ ಇಲ್ಲದೆಯೇ ದಿಢೀರನೆ ಮಂಡಿಸಿದ್ದಲ್ಲದೆ, ಸಂಸತ್ ಸದಸ್ಯರಿಗೆ ಮಸೂದೆಯನ್ನು ಓದಲು, ವಿಶ್ಲೇಷಿಸಲು ಅವಕಾಶವನ್ನೇ ನೀಡದೆ ರಾಜ್ಯಸಭೆಯಲ್ಲಿಯೂ ಅನುಮೋದನೆ ಪಡೆಯಲಾಯಿತು.
  - 2021ರ ಮುಂಗಾರು ಅಧಿವೇಶನದಲ್ಲಿ ನಿಗಧಿತ ಕಲಾಪಕ್ಕೆ ಹೊರತಾಗಿ 11 ಪೂರಕ ವಿಷಯಗಳ ಪಟ್ಟಿಯನ್ನು ಸೇರಿಸಲಾಯಿತು. ರಾಜ್ಯಸಭೆಯಲ್ಲಿ ಸೇರಿಸಿದ 9 ವಿಷಯಗಳ ಪಟ್ಟಿಯಲ್ಲಿ 6 ವಿವಿಧ ಮಸೂದೆಗಳ ಮಂಡನೆ ಮತ್ತು ಅನುಮೋದನೆಗೆ ಸಂಬಂಧಿಸಿದ್ದವು. ಹೀಗೆ ತರಾತುರಿಯಲ್ಲಿ ಸೇರಿಸಿದ್ದರ ಪರಿಣಾಮ ಸಂಸತ್ ಸದಸ್ಯರಿಗೆ ಮಸೂದೆಗಳನ್ನು, ಓದಲು, ವಿಶ್ಲೇಷಿಸಲು, ಚರ್ಚೆ ಮಾಡಲು ಅಥವಾ ತಿದ್ದುಪಡಿಯನ್ನು ಸೂಚಿಸಲು ಅವಕಾಶ ಇಲ್ಲವಾಯಿತು. ರಾಜ್ಯಸಭೆ ಕಲಾಪದ ಕೊನೆಯ ದಿನದಂದು ಸಂವಿಧಾನ ತಿದ್ದುಪಡಿ (105ನೇ) ಮಸೂದೆ ಹಾಗೂ ಮತ್ತೆರಡು ಮಸೂದೆಗಳ ಮಂಡನೆಯನ್ನು ಸೇರಿಸಲಾಯಿತು. ತಿದ್ದುಪಡಿಗಳನ್ನು ಸೂಚಿಸಲು ಸಂಸದರಿಗೆ ದೊರೆತ ಸಮಯ ಕೇವಲ ಒಂದು ಗಂಟೆ.
  - 2012ರ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರ ಚುನಾವಣೆ ಕಾನೂನು ತಿದ್ದುಪಡಿ ಮಸೂದೆಯನ್ನು (ಆಧಾರ್ ಮತ್ತು ಚುನಾವಣೆ ಗುರುತು ಚೀಟಿಗಳನ್ನು ಲಿಂಕ್ ಮಾಡುವುದೂ ಸೇರಿದಂತೆ ಇತರೆ ತಿದ್ದುಪಡಿಗಳು) ಲೋಕಸಭೆಯಲ್ಲಿ ಮಂಡಿಸಿದ ದಿನವೇ ಅನುಮೋದನೆ ನೀಡುವಂತೆ ಒತ್ತಡ ಹೇರಿತು. ಈ ಕುರಿತು ಚರ್ಚೆಗೆ ಸಿದ್ಧತೆ ನಡೆಸಲು ಸದಸ್ಯರಿಗೆ ಕಾಲಾವಕಾಶ ನೀಡಲಿಲ್ಲ. ರಾಜ್ಯಸಭೆಯಲ್ಲಿ ಪೂರ್ವ ಸೂಚನೆ ಇಲ್ಲದೆ ಈ ಮಸೂದೆಯನ್ನು ಮರುದಿನವೇ ಚರ್ಚೆಗೆ ಎತ್ತಿಕೊಳ್ಳಲಾಯಿತು.
  - 2023ರ ಮುಂಗಾರು ಅಧಿವೇಶನದ ಕೊನೆಯ ದಿನ ಮೂರು ಅಪರಾಧ ಸಂಹಿತೆ ಮಸೂದೆಗಳನ್ನು ದಿಢೀರನೆ ಮಂಡಿಸಲಾಯಿತು.
  - 2023ರ ಚಳಿಗಾಲದ ಅಧಿವೇಶನದಲ್ಲಿ ಟೆಲಿಕಮ್ಯುನಿಕೇಷನ್ ಮಸೂದೆಯನ್ನು ಕೊನೆಯ ಗಳಿಗೆಯಲ್ಲಿ ಕಲಾಪಕ್ಕೆ ಸೇರಿಸಿ, ಮಂಡಿಸಲಾಯಿತು.
  - ಮುಂದಿನ ಲೋಕಸಭೆ ಚುನಾವಣೆಗೆ ಮುನ್ನಿನ, ಈ ಸರ್ಕಾರದ ಕೊನೆಯ ಅಧಿವೇಶನದಲ್ಲಿ ಫೆಬ್ರವರಿ 5, 2024ರಂದು ದಿನದ ಕಲಾಪದ ಕೊನೆಯಲ್ಲಿ ಮೂರು ಮಸೂದೆಗಳನ್ನು ಮಂಡಿಸಲಾಯಿತು.
  - ಈ ಕೊನೆಯ ಅಧಿವೇಶನದಲ್ಲಿ ಒಟ್ಟು ಮೂರು ಮಸೂದೆಗಳನ್ನು ಮಂಡಿಸುವುದಾಗಿ ಸರ್ಕಾರ ಮುಂಚಿತವಾಗಿ ತಿಳಿಸಿತ್ತು. ಆದರೆ ಕಲಾಪದಲ್ಲಿ ಪಟ್ಟಿಮಾಡಲಾಗದ ಹೊಸ ಮೂರು ಮಸೂದೆಗಳನ್ನು ಮಂಡಿಸಿದ್ದಲ್ಲದೆ, ಹಿಂದಿನ ಅಧಿವೇಶನದಲ್ಲಿ ಅನುಮೋದನೆಯಾಗದೆ ಬಾಕಿಯಾಗಿದ್ದ ಮತ್ತೆರಡು ಮಸೂದೆಗಳನ್ನೂ ತೂರಿಸಿತು. ಇವುಗಳು ಕಲಾಪ ಪಟ್ಟಿಯಲ್ಲಿ ಇರಲಿಲ್ಲ.

**ಆರೋಪ 5:** ಕಾಯಿದೆಗಳ ರಚನೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇರುವುದಿಲ್ಲ, ಸಾರ್ವಜನಿಕರೊಂದಿಗೆ ಸಮಾಲೋಚನೆ ಮಾಡದಿರುವುದು, ಶಾಸನ–ಪೂರ್ವ ಸಮಾಲೋಚನೆ ಪ್ರಕ್ರಿಯೆಯ ಉಲ್ಲಂಘನೆ ಮತ್ತು ಮಸೂದೆಗಳನ್ನು ಸ್ಥಾಯಿ ಸಮಿತಿಗಳ ಪರಿಶೀಲನೆಗೆ ಒಳಪಡಿಸದೆ ಇರುವುದು

**ಪುರಾವೆಗಳು:**

- 2009ರಿಂದ 2014ರ ಅವಧಿಯಲ್ಲಿ ಮಂಡನೆಯಾದ ಒಟ್ಟು ಮಸೂದೆಗಳ ಪೈಕಿ ಶೇ.71ನ್ನು ಸ್ಥಾಯಿಸಮಿತಿಗಳ ಮುಂದೆ ಚರ್ಚೆಗೆ ತರಲಾಗಿತ್ತು. ಆದರೆ, 2019ರ ನಂತರ ಕೇವಲ ಶೇ.16ರಷ್ಟು ಮಸೂದೆಗಳನ್ನು ಮಾತ್ರ ಸ್ಥಾಯಿ ಸಮಿತಿಗಳಿಗೆ ಕಳುಹಿಸಲಾಗಿದೆ.
- 2014ರಿಂದ 2021ರ ಅವಧಿಯಲ್ಲಿ ಮಂಡನೆಯಾದ ಒಟ್ಟು 301 ಮಸೂದೆಗಳಲ್ಲಿ ಕೇವಲ 74 ಮಸೂದೆಗಳನ್ನು, ಶೇ.24.5ರಷ್ಟು, ಮಾತ್ರ ಸಮಾಲೋಚನೆಗಾಗಿ ಮುಂಚಿತವಾಗಿ ವಿತರಿಸಲಾಗಿತ್ತು. ಶಾಸನ–ಪೂರ್ವ ಸಮಾಲೋಚನೆ ನೀತಿಯ ಅನುಸಾರ ಮಸೂದೆಯ ಸಾರ್ವಜನಿಕ ಸಮಾಲೋಚನೆಗೆ ಕನಿಷ್ಠ 30 ದಿನಗಳ ಕಾಲಾವಕಾಶ ನೀಡಬೇಕು. ಆದರೆ ಈ 74ರಲ್ಲಿ ಸುಮಾರು 40 ಮಸೂದೆಗಳಿಗೆ 30 ದಿನಕ್ಕಿಂತಲೂ ಕಡಿಮೆ ಕಾಲಾವಕಾಶ ನೀಡಲಾಗಿತ್ತು.
- ಹೆಚ್ಚು ವಿವಾದಾತ್ಮಕ ಮಸೂದೆಗಳನ್ನು ವಿಷಯಾಧಾರಿತ ಸ್ಥಾಯಿಸಮಿತಿಗಳಿಗೆ ಕಳುಹಿಸುವ ಬದಲು ಜಂಟಿ ಸಂಸದೀಯ ಸಮಿತಿಗೆ ಕಳುಹಿಸಲಾಗಿದೆ. ಕಾರಣವಿಷ್ಟೇ– ಜಂಟಿ ಸಂಸದೀಯ ಸಮಿತಿಯ ಸದಸ್ಯರನ್ನು ಸರ್ಕಾರವೇ ನೇಮಕ ಮಾಡುತ್ತದೆ, ವಿಷಯಾಧಾರಿತ ಸ್ಥಾಯಿ ಸಮಿತಿಗಳ ಅಧ್ಯಕ್ಷರು ಪ್ರತಿಪಕ್ಷದ ಸದಸ್ಯರಾಗಿರುತ್ತಾರೆ. 2014ರಿಂದ ಈ ಕೆಳಗಿನ ಮಸೂದೆಗಳನ್ನು, ಬಿಜೆಪಿ ಸದಸ್ಯರು ಅಧ್ಯಕ್ಷರಾಗಿರುವ ಜಂಟಿ ಸಂಸದೀಯ ಸಮಿತಿಗಳಿಗೆ ಕಳುಹಿಸಲಾಗಿದೆ:
  - ಭೂಸ್ವಾಧೀನ ತಿದ್ದುಪಡಿ ಮಸೂದೆ
  - ಪೌರತ್ವ ತಿದ್ದುಪಡಿ ಮಸೂದೆ
  - ವೈಯಕ್ತಿಕ ಮಾಹಿತಿ ಸಂರಕ್ಷಣೆ ಮಸೂದೆ
  - ಅರಣ್ಯ ಸಂರಕ್ಷಣೆ (ತಿದ್ದುಪಡಿ) ಮಸೂದೆ
  - ಜೈವಿಕ ವೈವಿಧ್ಯತೆ (ತಿದ್ದುಪಡಿ) ಮಸೂದೆ
- ಈ ಸಮಿತಿಗಳೂ ತಮ್ಮ ವರದಿಯನ್ನು ಸಲ್ಲಿಸುವ ಮೊದಲು ಸಾರ್ವಜನಿಕರಿಂದ ಪ್ರತಿಕ್ರಿಯೆಗಳನ್ನು ಆಹ್ವಾನಿಸುವ, ಸಮಾಲೋಚನೆ ನಡೆಸುವ ಪ್ರಕ್ರಿಯೆಗಳನ್ನು ಸಮರ್ಥವಾಗಿ ಮಾಡುತ್ತಿಲ್ಲ. ಜನ ವಿಶ್ವಾಸ ಮಸೂದೆಗೆ ಸಂಬಂಧಿಸಿದ ಜಂಟಿ ಸಂಸದೀಯ ಸಮಿತಿಯು ಸಾರ್ವಜನಿಕರಿಂದ ಪ್ರತಿಕ್ರಿಯೆಗಳನ್ನು ಸಂಗ್ರಹಿಸಲೇ ಇಲ್ಲ. ಮೂರು ಅಪರಾಧ ಸಂಹಿತೆ ಮಸೂದೆಗಳನ್ನು ಅಧ್ಯಯನ ಮಾಡುತ್ತಿದ್ದ, ಬಿಜೆಪಿ ಸದಸ್ಯ ಅಧ್ಯಕ್ಷರಾಗಿದ್ದ ಗೃಹ ಇಲಾಖೆ ಸ್ಥಾಯಿ ಸಮಿತಿಯು ಮಸೂದೆಗಳ ಕುರಿತು ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸಲೇ ಇಲ್ಲ. ಈ ಸಮಿತಿಯು ತರಾತುರಿಯಲ್ಲಿ ತನ್ನ ಕಲಾಪಗಳನ್ನು ನಡೆಸಿದ್ದು, ತಮ್ಮ ಆಯ್ಕೆಯ ಜನರನ್ನಷ್ಟೇ ಸಮಿತಿಯ ಮುಂದೆ ಕರೆದು ಅವರ ಅಭಿಪ್ರಾಯ ಸಂಗ್ರಹಿಸಿದೆ ಎಂದು ಪ್ರತಿಪಕ್ಷಗಳ ಹಲವಾರು ಸದಸ್ಯರು ತಮ್ಮ ಭಿನ್ನಾಭಿಪ್ರಾಯವನ್ನು ದಾಖಲಿಸಿದ್ದಾರೆ.
- ಅರಣ್ಯ ಸಂರಕ್ಷಣೆ ತಿದ್ದುಪಡಿ ಮಸೂದೆಯ ಸಿಂಧುತ್ವವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ದಾವೆಯ ಅನುಸಾರ, ಈ ಮಸೂದೆಯನ್ನು ವಿಮರ್ಶಿಸಿ 1309 ಜನಾಭಿಪ್ರಾಯಗಳು ಸಲ್ಲಿಕೆಯಾಗಿದ್ದರೂ ಜಂಟಿ ಸಂಸದೀಯ ಸಮಿತಿಯು ಬಹುತೇಕ ಅಭಿಪ್ರಾಯಗಳನ್ನು ನಿರ್ಲಕ್ಷಿಸಿದೆ ಹಾಗೂ ಮಸೂದೆಯ ಸುಧಾರಣೆಗೆ ಅಗತ್ಯ ಸಲಹೆಗಳನ್ನು ನೀಡಲು ವಿಫಲವಾಗಿದೆ.

**ಆರೋಪ 6:** ಸಾಕಷ್ಟು ಪರಿಶೀಲನೆ, ಮುನ್ನೆಚ್ಚರಿಕೆ ಇಲ್ಲದೆ ಬಜೆಟ್ ಮಂಡನೆ ಮಾಡುವುದು; ಆರ್ಥಿಕ ಮಸೂದೆಯಲ್ಲಿ ಎಲೆಕ್ಷನ್ ಬಾಂಡ್‌ಗಳ ವಿಷಯವನ್ನು ಸೇರಿಸುವಷ್ಟು ಬೇಜವಾಬ್ದಾರಿತನ ಮಾಡುವುದು

**ಪುರಾವೆಗಳು:**

- 2016ರಿಂದ 2023ರವರೆಗಿನ ಅವಧಿಯಲ್ಲಿ ಬಜೆಟ್‌ನ ಶೇ.79 ಭಾಗ ಯಾವುದೇ ಚರ್ಚೆ ಇಲ್ಲದೆ ಅನುಮೋದನೆಗೊಂಡಿದೆ. ಸಾಮಾನ್ಯವಾಗಿ ಕೆಲವು ಸಚಿವಾಲಯಗಳ ಬಜೆಟ್‌ಅನ್ನು ವಿವರವಾಗಿ ಚರ್ಚಿಸಿ, ಪ್ರತ್ಯೇಕವಾಗಿ ಅವುಗಳನ್ನು ಮತಕ್ಕೆ ಹಾಕುವುದು ಲೋಕಸಭೆಯಲ್ಲಿರುವ ರೂಢಿ. ಬಜೆಟ್ ಮೇಲಿನ ಚರ್ಚೆಗೆಂದು ಮೀಸಲಿಟ್ಟ ಸಮಯವು ಮುಗಿದ ನಂತರ ಉಳಿದ ಇಲಾಖೆಗಳ ಬಜೆಟನ್ನು ಒಟ್ಟು ಸೇರಿಸಿ ಮತಕ್ಕೆ ಹಾಕಲಾಗುತ್ತದೆ. ಇದನ್ನು 'ಗಿಲೊಟಿನ್' (ಶಿರಚ್ಛೇದ) ಎನ್ನುತ್ತಾರೆ. ಅಧಿವೇಶನದ ಅವಧಿಯನ್ನು ಕಡಿಮೆ ಮಾಡಿರುವುದು, ಬಜೆಟ್ ಚರ್ಚೆಯ ಅವಧಿಯನ್ನು ಮೊಟಕುಗೊಳಿಸಿರುವುದು, ಕಲಾಪ ಪಟ್ಟಿ ಸಿದ್ಧತೆಯಲ್ಲಿ ಜಾಗ್ರತೆವಹಿಸದಿರುವುದು, ಚರ್ಚೆ ಮತ್ತು ಪಾರದರ್ಶಕ ಹೊಣೆಗಾರಿಕೆಯಲ್ಲಿ ಆಸಕ್ತಿ ಇಲ್ಲದಿರುವುದು – ಇವು

ಬಜೆಟ್‌ನ ಪೂರ್ಣ ಪ್ರಮಾಣದ ಚರ್ಚೆಯನ್ನು ಕಡಿಮೆ ಮಾಡಿದೆ ಹಾಗೂ ಚರ್ಚೆ ಇಲ್ಲದೆ ಅನುಮೋದಿಸುವ ಪ್ರಮಾಣವನ್ನು ಹೆಚ್ಚಿಸಿದೆ.

- 2018ರ ಬಜೆಟ್ ಅಧಿವೇಶನದಲ್ಲಿ ಇಡೀ ಬಜೆಟನ್ನು ಯಾವುದೇ ಚರ್ಚೆ ಇಲ್ಲದೆ, ಗದ್ದಲಗಳ ನಡುವೆ ಕೇವಲ ಒಂದು ಗಂಟೆಯ ಅವಧಿಯೊಳಗೆ ಅನುಮೋದನೆ ಪಡೆಯಲಾಯಿತು. ಇದನ್ನು ಶೇ.100 ಗಿಲಿಟೋನ್ (ಶಿರಚ್ಛೇದ) ಎನ್ನುತ್ತಾರೆ. ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಸಭಾಪತಿಗಳು ಅವಕಾಶ ನೀಡದೆ ಇದ್ದುದಕ್ಕೆ ಪ್ರತಿಪಕ್ಷಗಳು ಪ್ರತಿಭಟನೆಯಲ್ಲಿ ನಿರತರಾಗಿದ್ದರಿಂದ ಬಜೆಟ್ ಕುರಿತ ಚರ್ಚೆಗೆ ಮೀಸಲಿಟ್ಟ ಸಮಯ ಗದ್ದಲದಲ್ಲಿ ಮುಗಿದುಹೋಗಿತ್ತು.
- 2018ರ ಆರ್ಥಿಕ ಮಸೂದೆಯೂ ಯಾವುದೇ ಚರ್ಚೆ ಇಲ್ಲದೆ ಕೇವಲ 18 ನಿಮಿಷಗಳಲ್ಲಿ ಅನುಮೋದನೆಯಾಗಿತ್ತು.
- 2020ರಲ್ಲಿ ಸರ್ಕಾರವು ಅಧಿವೇಶನದ ಅವಧಿಯನ್ನು ದಿಢೀರನೆ ಮೊಟಕುಗೊಳಿಸಿದ್ದರಿಂದ ಆಗಲೂ ಆರ್ಥಿಕ ಮಸೂದೆಯು ಒಂದು ಗಂಟೆಯೊಳಗಾಗಿ ಅನುಮೋದನೆಗೊಂಡಿತ್ತು. ಅದಾದ ಕೆಲವೇ ದಿನಗಳಲ್ಲಿ ರಾಷ್ಟ್ರ ಮಟ್ಟದ ಲಾಕ್‌ಡೌನ್ ಪ್ರಕಟಿಸಲಾಯಿತು.
- 2017ರ ಆರ್ಥಿಕ ಮಸೂದೆಯು ಆರ್ಥಿಕವಲ್ಲದ, ವಿವಾದಾತ್ಮಕವಾದ ಅಂಶಗಳಿಂದ ಕೂಡಿತ್ತು. ಉದಾಹರಣೆಗೆ– ಟ್ರಿಬ್ಯುನಲ್‌ಗಳ ಪುನರ್ರಚನೆ, ಎಲೆಕ್ಟೊರಲ್ ಬಾಂಡ್ ಮೂಲಕ ಅನಾಮಧೇಯರಿಂದ ರಾಜಕೀಯ ನಿಧಿ ಸಂಗ್ರಹಣೆ, ಪ್ಯಾನ್ ಪಡೆಯಲು ಆಧಾರ್ ಸಂಖ್ಯೆಯನ್ನು ಕಡ್ಡಾಯಗೊಳಿಸುವುದು, ಇತ್ಯಾದಿ.
- 2023–24ರ ಬಜೆಟ್ ಕೂಡ ಇಡಿಯಾಗಿ ಯಾವುದೇ ಚರ್ಚೆ ಇಲ್ಲದೆ, ಕೇವಲ 8 ನಿಮಿಷಗಳಲ್ಲಿ, ಪ್ರತಿಪಕ್ಷಗಳ ಪ್ರತಿಭಟನೆ, ಗದ್ದಲಗಳ ನಡುವೆ ಅನುಮೋದನೆಯಾಗಿತ್ತು. ಅದಾನಿ ಹಗರಣ ಕುರಿತು ಜಂಟಿ ಸಂಸದೀಯ ಸಮಿತಿಯನ್ನು ರಚನೆ ಮಾಡುವಂತೆ ಪ್ರತಿಪಕ್ಷಗಳು ಬೇಡಿಕೆ ಮಂಡಿಸಿ ಹೋರಾಡುತ್ತಿದ್ದವು. ಇದರ ನಡುವೆಯೇ ಆರ್ಥಿಕ ಮಸೂದೆಗೂ 35 ನಿಮಿಷಗಳ ಅವಧಿಯಲ್ಲಿ ಅನುಮೋದನೆ ಪಡೆಯಲಾಯಿತು.
- ಸ್ಥಾಯಿ ಸಮಿತಿಗಳು ಪ್ರತಿಯೊಂದು ಇಲಾಖೆಯ ಬಜೆಟನ್ನು ಕೂಲಂಕಷವಾಗಿ ಪರಿಶೀಲಿಸಲು ಸಾಧ್ಯವಾಗುವಂತೆ ಪ್ರತಿ ಬಜೆಟ್ ಅಧಿವೇಶನಕ್ಕೆ ಹಲವು ದಿನಗಳ ವಿರಾಮ ಕೊಟ್ಟು, ಪುನಃ ಸೇರಲಾಗುತ್ತದೆ. ಈಗಿನ ಸರ್ಕಾರವು ಸ್ಥಾಯಿ ಸಮಿತಿಗಳಿಗೆ ಬಜೆಟ್ ಅಧ್ಯಯನ ಮಾಡಲು ಕೊಡುವ ಈ ಸಮಯವನ್ನು ಕಡಿತಮಾಡಿದೆ. 2016ರಲ್ಲಿ 40 ದಿನಗಳಿದ್ದ ಈ ವಿರಾಮದ ಅವಧಿ 2021ರಲ್ಲಿ 20 ದಿನಕ್ಕೆ ಕುಸಿದಿದೆ.

**ಆರೋಪ 7:** 2023ನೇ ಸಾಲಿನ ಚಳಿಗಾಲದ ಅಧಿವೇಶನದಲ್ಲಿ ಹಿಂದೆಂದೂ ಇಲ್ಲದಷ್ಟು ಸಂಖ್ಯೆಯ ಪ್ರತಿಪಕ್ಷದ ಸದಸ್ಯರನ್ನು ಉಚ್ಚಾಟನೆ ಮಾಡಿರುವುದು, ಪ್ರತಿಪಕ್ಷಗಳ ಪ್ರಾತಿನಿಧ್ಯವೇ ಇಲ್ಲದ ಸದನದಲ್ಲಿ ವಿವಾದಾತ್ಮಕ ಮಸೂದೆಗಳನ್ನು ಮಂಡಿಸಿ, ಅನುಮೋದನೆ ಪಡೆದಿರುವುದು

**ಪುರಾವೆ:**

- ಈಗ ಇದೊಂದು ನಿತ್ಯದ ಅಭ್ಯಾಸವಾಗಿಬಿಟ್ಟಿದೆ– ಯಾವುದಾದರೂ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಯಬೇಕೆಂದು ಪ್ರತಿಪಕ್ಷಗಳು ಬೇಡಿಕೆ ಮಂಡಿಸುತ್ತವೆ, ಚರ್ಚೆಯನ್ನು ನಿರಾಕರಿಸುವ ಸರ್ಕಾರ ಸುಮ್ಮನೆ ಕಾಲಹರಣಕ್ಕೆ ಎಡೆಮಾಡಿಕೊಡುತ್ತದೆ, ಪ್ರತಿಪಕ್ಷಗಳು ಪ್ರತಿಭಟಿಸುತ್ತವೆ ಮತ್ತು ಕಲಾಪ ನಡೆಯದಂತೆ ಅಡ್ಡಿಪಡಿಸುತ್ತವೆ. ಇದನ್ನೇ ನೆಪಮಾಡಿಕೊಳ್ಳುವ ಸರ್ಕಾರ ಪ್ರತಿಭಟನೆಗಳ ನಡುವೆಯೇ ತನ್ನ ಮಸೂದೆಗಳನ್ನು ಮಂಡಿಸಿ, ಯಾವುದೇ ಚರ್ಚೆ ಇಲ್ಲದೆ ಸದನದ ಒಪ್ಪಿಗೆ ಪಡೆಯುತ್ತದೆ. ಈ ವರ್ಷ ಸಂಸತ್ತಿನ ಮೇಲೆ ನಡೆದ ದಾಳಿ ಮತ್ತು ಭದ್ರತೆಯ ವೈಫಲ್ಯ ಕುರಿತು ಚರ್ಚೆ ನಡೆಸಲೇಬೇಕೆಂದು ಆಗ್ರಹಿಸಿ ಪ್ರತಿಪಕ್ಷಗಳು ನಡೆಸಿದ ಧರಣಿ ಮತ್ತು ಪ್ರತಿಭಟನೆಗಳ ಕಾರಣ ಪ್ರತಿಪಕ್ಷಗಳ 146 ಸದಸ್ಯರನ್ನು ಸದನದಿಂದ ಉಚ್ಚಾಟಿಸಲಾಯಿತು. ಹಿಂದೆಂದೂ ಈ ಪ್ರಮಾಣದ ಉಚ್ಚಾಟನೆ ನಡೆದಿರಲಿಲ್ಲ. ಉಚ್ಚಾಟಿತ ಸದಸ್ಯರ ಒಟ್ಟು ಪ್ರಮಾಣ ಸಂಸತ್ತಿನ ಎರಡೂ ಸದನಗಳ ಶೇ.20ರಷ್ಟು ಇತ್ತು. ಬಹುತೇಕ ಇಡಿಯಾಗಿ ಪ್ರತಿಪಕ್ಷಗಳ ಪ್ರಾತಿನಿಧ್ಯ ಇಲ್ಲದಂತೆ ಮಾಡಲಾಯಿತು.
- ಬಹುತೇಕ ಸಂಸತ್ ಸದಸ್ಯರನ್ನು ಚಳಿಗಾಲದ ಅಧಿವೇಶನದ ಪೂರ್ಣ ಅವಧಿಗೆ ಉಚ್ಚಾಟಿಸಲಾಯಿತು. ಕೆಲವರನ್ನು ಮಾತ್ರ ಅನಿರ್ದಿಷ್ಟ ಅವಧಿಗೆ ಉಚ್ಚಾಟಿಸಿ, ಹಕ್ಕುಬಾಧ್ಯತಾ ಸಮಿತಿಯ ವಿಚಾರಣೆಗೆ ಗುರಿಮಾಡಲಾಯಿತು. ಈ ರೀತಿಯ ಅನಿರ್ದಿಷ್ಟ ಅವಧಿಯ ಉಚ್ಚಾಟನೆ ಮಾಡುವ ಅಧಿಕಾರ ಸಭಾಪತಿಗಾಗಲಿ, ಸಂಸತ್ತಿಗಾಗಲಿ ಇರುವುದಿಲ್ಲ, ಆ ಕಾರಣ ಈ ಉಚ್ಚಾಟನೆಗಳು ಕಾನೂನಿನ ಉಲ್ಲಂಘನೆಯಾಗಿದೆ. ಸಭಾಪತಿಗಳು ಯಾವುದೇ ಸದಸ್ಯರನ್ನು ಆ ಅಧಿವೇಶನದ ಅವಧಿಗೆ ಮಾತ್ರ ಉಚ್ಚಾಟನೆ ಮಾಡುವ ಅಧಿಕಾರ ಹೊಂದಿರುತ್ತಾರೆ.

- ಪ್ರತಿಪಕ್ಷಗಳ ನೂರಾರು ಸದಸ್ಯರನ್ನು ಸದನದಿಂದ ಹೊರಹಾಕಿದ ನಂತರ ಸರ್ಕಾರವು ಪ್ರಮುಖವಾದ ಕೆಲವು ಮಸೂದೆಗಳನ್ನು – ಮೂರು ಅಪರಾಧ ಸಂಹಿತೆ ಮಸೂದೆಗಳು, ಟೆಲಿಕಮ್ಯುನಿಕೇಷನ್ ಮಸೂದೆ, ಮುಖ್ಯ ಚುನಾವಣೆ ಆಯುಕ್ತರು ಮತ್ತು ಇತರ ಚುನಾವಣೆ ಆಯುಕ್ತರನ್ನು ನೇಮಕಮಾಡುವ ಮಸೂದೆ, ಇತ್ಯಾದಿ – ಮಂಡಿಸಿತು.

**ಆರೋಪ 8:** ಪ್ರಶ್ನೆಗಳನ್ನು ಎದುರಿಸಲು ಮುಜುಗರ, ಪ್ರತಿಪಕ್ಷಗಳ ಸಂಸತ್ ಸದಸ್ಯರ ಪ್ರಶ್ನೆಗಳನ್ನು ಪಟ್ಟಿಯಿಂದ ಕಿತ್ತುಹಾಕುವುದು, ಸಚಿವಾಲಯಗಳು ಸದಸ್ಯರ ಪ್ರಶ್ನೆಗಳಿಗೆ ಹಾರಿಕೆಯ ಉತ್ತರ ನೀಡುವುದು

**ಪುರಾವೆ:**

- 2023ರ ಚಳಿಗಾಲದ ಅಧಿವೇಶನದಲ್ಲಿ ಸದನದಿಂದ ಉಚ್ಚಾಟಿಸಲಾದ ಪ್ರತಿಪಕ್ಷಗಳ ಸದಸ್ಯರ ಸುಮಾರು 290 ಪ್ರಶ್ನೆಗಳನ್ನು ಕಲಾಪ ಪಟ್ಟಿಯಿಂದ ಕಿತ್ತುಹಾಕಲಾಯಿತು. ಹೀಗೆ ಉಚ್ಚಾಟಿತ ಸದಸ್ಯರ ಪ್ರಶ್ನೆಗಳನ್ನು ಕಿತ್ತುಹಾಕಲು ಯಾವ ನಿಯಮದಲ್ಲೂ ಅವಕಾಶ ಇರುವುದಿಲ್ಲ.
- ಹೀಗೆ ಪ್ರಶ್ನೆಗಳನ್ನು ಕಿತ್ತು ಹಾಕಿರುವುದು ಇದೇ ಮೊದಲೇನಲ್ಲ. 2015ರಲ್ಲಿ ಹೀಗೆ ಮಾಡಲಾಗಿತ್ತು ಎನ್ನುತ್ತವೆ ಪತ್ರಿಕಾ ವರದಿಗಳು. ಆ ನಂತರ 2020ರಲ್ಲಿ, 2021ರಲ್ಲಿ ಮತ್ತು 2023ರಲ್ಲಿ ಅದನ್ನು ಮುಂದುವರೆಸಲಾಗಿದೆ.
- 2020ರ ಮುಂಗಾರು ಅಧಿವೇಶನದಲ್ಲಿ ಕೋವಿಡ್‌ನ ನೆಪ ಹೇಳಿ ಪ್ರಶ್ನೋತ್ತರ ಅವಧಿಯನ್ನೇ ಕಿತ್ತು ಹಾಕಿತ್ತು ಸರ್ಕಾರ. ಕೊನೆಗೆ ಪ್ರತಿಪಕ್ಷಗಳ ಆಗ್ರಹಕ್ಕೆ ಮಣಿದು, ಕೇವಲ ಲಿಖಿತ ಪ್ರಶ್ನೆಗಳಿಗೆ ಉತ್ತರಿಸಲು ಸಮ್ಮತಿಸಿತು. 2023ರಲ್ಲಿ ನಡೆಸಿದ ವಿಶೇಷ ಅಧಿವೇಶನದಲ್ಲೂ ಪ್ರಶ್ನೋತ್ತರ ಅವಧಿಯೇ ಇರಲಿಲ್ಲ. ಹಾಗೂ ಕೇಳಿದ ಯಾವ ಪ್ರಶ್ನೆಗೂ ಸರ್ಕಾರ ಉತ್ತರಿಸಲಿಲ್ಲ.
- ಸಚಿವಾಲಯಗಳೂ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತವೆ. ವಿವಾದಾತ್ಮಕ ಪ್ರಶ್ನೆಗಳ ಉಪಪ್ರಶ್ನೆಗಳನ್ನು ನಿರ್ಲಕ್ಷಿಸುತ್ತವೆ. ಅನೇಕ ಬಾರಿ ದಾರಿ ತಪ್ಪಿಸುವ ಉತ್ತರಗಳನ್ನು ಇಲ್ಲವೇ ಅಪೂರ್ಣ ಉತ್ತರಗಳನ್ನು ನೀಡಲಾಗುತ್ತದೆ. ಇಲ್ಲವೇ ಮಾಹಿತಿ ಲಭ್ಯವಿಲ್ಲ ಎಂದು ಬಿಡುತ್ತವೆ. ಹಿಂದಿನ ಸರ್ಕಾರಗಳೂ ಕೂಡ ಸಂಸದರ ಪ್ರಶ್ನೆಗಳಿಗೆ ಉತ್ತರ ಹೇಳುವುದರಿಂದ ತಪ್ಪಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಿವೆ. ಯಾವ ಸರ್ಕಾರಕ್ಕೂ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುವುದು ಸುಲಭವೆನಿಸುವುದಿಲ್ಲ. ಆದರೆ ಈಗಿನ ಸರ್ಕಾರ ಜನರಿಗೆ ಉತ್ತರದಾಯಿ ಆಗಿರುವುದನ್ನು ಸದಾ ತಿರಸ್ಕರಿಸುತ್ತಲೇ ಬಂದಿದೆ.

**ಈ ಎಲ್ಲ ಪುರಾವೆಗಳ ಆಧಾರದ ಮೇಲೆ, ಭಾರತದ ಜನತೆಯಾದ ನಾವು, ಈಗಿನ ಭಾರತ ಸರ್ಕಾರವು ಸಂವಿಧಾನದಲ್ಲಿ ಅಳವಡಿಸಿರುವ ಪ್ರಜಾಪ್ರಭುತ್ವ, ನ್ಯಾಯಪರತೆ, ಕಾನೂನು ನಿಯಮಗಳು ಮತ್ತು ಹೊಣೆಗಾರಿಕೆಗಳನ್ನು ಉಲ್ಲಂಘಿಸಿದೆ ಎಂಬ ಆರೋಪವನ್ನು ಹೊರಿಸುತ್ತಿದ್ದೇವೆ.**

***

ಈ ಆರೋಪಪಟ್ಟಿಯನ್ನು ಕೆಳಗಿನ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಅನುಮೋದಿಸಿದ್ದಾರೆ:

**ಸಂಸ್ಥೆಗಳು:**

1. All India Lawyers Association for Justice(AILAJ)
2. All India People's Science Network
3. Association for protection of Civil Rights (APCR)
4. Bahutva Karnataka
5. Bargi Bandh Visthapit Evam Prabhaavit Sangh, Madhya pradesh

6. Delhi Science Forum
7. Dynamic Action
8. Financial Accountability Network
9. Forum Against Oppression of Women- Mumbai
10. Gharelu Kamgaar Union
11. Human Rights Defenders Alert ;
12. Hasrat-e-Zindagi Mamuli; Mumbai
13. Indigenous Perspectives
14. Jan Sarokar
15. Maadhyam
16. Mazdoor Kisan Shakti Sanghatan (MKSS)
17. National Alliance for Justice Accountability and Rights(NAJAR)
18. National Alliance for People's Movements (NAPM)
19. Naveddu Nilladiddare - Karnataka
20. People's Alliance for Fundamental Right to Education
21. People's Union for Civil Liberties
22. Stree Jagruti Samiti - Karnataka
23. VIKASANA VIDHYABHYASA KENDRAM

**ವ್ಯಕ್ತಿಗಳು:**

1. Subodh Lal - Constitutional Conduct Group
2. Swati Narayan
3. Uma Shankari, Farmer, Citizen of india
4. Dr. Suhas Kolhekar, Health Rights, Education and Social Justice Activist
5. Sunder Burra, Retd. Civil Servant
6. Ashish Kothari, Pune
7. Dinesh Abrol
8. Nikhil Dey
9. ND Jayaprakash
10. Steve Rocha
11. Olencio, General Secretary, National Fishworkers Forum
12. Ashok Choudhary, All India Union of Forest Working People
13. Nirmal Gorana, Fight Inequality Alliance India
14. Denzil Fernandes, Social Scientist, Delhi
15. Medha Patkar, Narmada Bachao Andolan, National Alliance for People's Movement
16. Prasad Chacko
17. Ashish Ranjan, NAPM
18. Priya Darshini, Delhi Forum
19. Soumya Dutta, Senior Environmental Activist
20. Koninika Ray, National Federation of Indian Women

**For more information, please contact : 9880595032, 9818713833**